ಫಾರೆಸ್ಟ್.

ಇಸ್ತಿಹಾರ್‌ನಾಮಾ.

ತಾರೀಖು 14ನೇ ಆಗಸ್ಟ್ 1903.

ನಂ. 96—1213, ಮೈಸೂರ ಡಿಸ್ಟ್ರಿಕ್ಟಿನ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಂಪಾರ್ಟರೇಟರಾದ ಮೆ॥ ಪಿ. ಇ. ಬೆರ್ಚ್ ಯವರಿಗೆ 1903ನೇ ಏಪ್ರಿಲ್ 15ನೇ ಮುಕ್ತಂ 627-8—6327-8ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್‌ನಲ್ಲಿ ಕೊಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ, ಮೈಸೂರ ಸರ್ವಿಸ್ ರಿಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಪ್ರಿವಿಲೀಜ್ ರಜಾಕ್ಕೆ ಬದಲಾಯಿಸಲ್ಪಟ್ಟಿರುತ್ತೆ.

ತಾರೀಖು 14ನೇ ಆಗಸ್ಟ್ 1903.

ನಂ. 99—1216, ಮೈಸೂರ ಡಿಸ್ಟ್ರಿಕ್ಟಿನ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಂಪಾರ್ಟರೇಟರಾದ ಮೆ॥ ಪಿ. ಇ. ಬೆರ್ಚ್ ಯವರಿಗೆ 1903ನೇ ಆಗಸ್ಟ್ 5ನೇ ಮುಕ್ತಂ 84—1007ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ನಲ್ವತ್ತೊಂದು ದಿನಗಳ ಪ್ರಿವಿಲೀಜ್ ರಜಾ ಇನ್ನೂ ಹತ್ತು ದಿನಗಳು ಜಾಸ್ತಿ ಮಾಡಿರುತ್ತೆ.

ಹುಕುಂ ಬಮೋಜೀಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖಾ ಗವರ್ನಮೆಂಟ್ ಅಫಿಷಿಯೇಟಿಂಗ್ ಸೆಕ್ರಟೆರಿ.

ಮುಜರೈ.

ನೋಟಿಫಿಕೇಷನ್.

ತಾರೀಖು 18ನೇ ಆಗಸ್ಟ್ 1903, ಬೆಂಗಳೂರು.

ನಂ. 473, ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಪ್ರತಿ ಸಂವತ್ಸರವೂ ನಡೆಯುವ ಸಂಸ್ಕೃತ ವಿದ್ವತ್ಪರೀಕ್ಷೆಗಳು ಈ ವರುಷ 1903ನೇ ಇಸವಿ ಸೆಪ್ಟಂಬರ್ ಗುರ್ರೇ ತಾರೀಖಿನ ದಿನ ಆರಂಭಿಸಲ್ಪಡುವವು.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿ ರಾವ್,
ಮುಜರೈ ಇಲಾಖೆಯ ಡೆಪ್ಯೂಟಿ ಸೆಕ್ರಟೆರಿ.